ಗಳನ್ನು ಕಟ್ಟಿಸಿಕೊಡುತ್ತಿದ್ದೇವೆ. ಮತ್ತು ಬೇರೆ ಕಡೆಗೆ ಕೂಡ ಜಾಗ ಕೊಡಿಸಿದ್ದೇ ಆದರೆ ಕಟ್ಟಡ ಕಟ್ಟಿಸಿ ಕೊಡುತ್ತೇವೆ.

ಶ್ರೀ ಡಿ. ಟಿ. ಮಾಯಣ್ಣ.—ಹಾಲಿ ಮಾರುಕಟ್ಟೆಗಳು ನಡೆಯುತ್ತಿದ್ದಕ್ಕೆ ಮನೆಗಳಿಗೆ ಕೇವಲ ೪೦-೫೦ ರೂಪಾಯಿ ಬಾಡಿಗೆ ಕೊಡಲಾಗುತ್ತಿದೆ ಎಂದು ತಿಳಿದು ಬಂದಿದೆ. ಅದು ಹಿಂದಿನ ಕಾಲದಲ್ಲಿ ಗೊತ್ತು ಮಾಡಿರತಕ್ಕ ಬಾಡಿಗೆ. ಇತ್ತೀಚಿಗೇನಾದರೂ ಲೋಕೋಪಯೋಗಿ ಇಲಾಖೆಯವರ ಅಭಿಪ್ರಾಯವನ್ನು ತೆಗೆದುಕೊಂಡು ಬಾಡಿಗೆ ಕೊಡುತ್ತಿದ್ದೀರಾ ?

ಶ್ರೀಮತಿ ರೇಣುಕಾ ರಾಜೇಂದ್ರನ್.—ಕಡಿಮೆ ಬಾಡಿಗೆ ಕೊಡುತ್ತಿದ್ದಾರೆಂದು ಹೇಳುತ್ತಿದ್ದಾರೆ. ಅದನ್ನು ಪುನರ್ವಿಮರ್ಶೆ ಮಾಡುವ ಸಲುವಾಗಿ ಲೋಕೋಪಯೋಗಿ ಇಲಾಖೆಗಾದರೂ ಅರ್ಜಿ ಕೊಡಲಿ ಅಥವಾ ನಮ್ಮ ಇಲಾಖೆಗಾದರೂ ಅರ್ಜಿ ಕೊಟ್ಟರೆ ೀ ಎಕ್ಸಾಮಿನ್ ಮಾಡಿಸಿ ಕ್ರಮ ಕೈಗೊಳ್ಳುತ್ತೇವೆ. ಹಿಂದೆ ಎಷ್ಟು ಬಾಡಿಗೆಯನ್ನು ಗೊತ್ತು ಮಾಡಲಾಗಿತ್ತೊ ಅಷ್ಟನ್ನೇ ಕೊಡುತ್ತಿದ್ದೇವೆ. ಜಾಸ್ತಿ ಮಾಡ ಬೇಕೆಂದರೆ ಅರ್ಜಿ ಕೊಟ್ಟರೆ ಪರಿಶೀಲಿಸುತ್ತೇನೆ.

ಒಬ್ಬರು ಮಾನ್ಯ ಸದಸ್ಯರು.—ತುಮಕೂರು ಜಿಲ್ಲೆಯಲ್ಲಿ ರೇಷ್ಮೆ ವ್ಯವಸಾಯಕ್ಕೆ ಬಹುಮಟ್ಟಿಗೆ ಅನುಕೂಲತೆ ಮಾಡಿಕೊಡಲಾಗಿದೆ. ಆದರೆ ಅಲ್ಲಿನ ರೈತರಿಗೆ ಮಾರುಕಟ್ಟೆಯ ಸೌಲಭ್ಯ ಮಾತ್ರ ಇಲ್ಲ. ಅಲ್ಲಿನ ರೈತರು ಉತ್ಪಾದಿಸಿದ ಗೂಡನ್ನು ಚನ್ನಪಟ್ಟಣಕ್ಕೋ ಅಥವಾ ಕನಕಪುರಕ್ಕೊ ತೆಗೆದುಕೊಂಡು ಹೋಗಬೇಕಾಗುತ್ತದೆ. ಆದ್ದರಿಂದ, ತುಮಕೂರು ನಗರದಲ್ಲಿ ಮಾರುಕಟ್ಟೆಯನ್ನು ಮಾಡುವುದಕ್ಕೆ ಕ್ರಮ ಕೈಗೊಳ್ಳುತ್ತೀರಾ ?

ಶ್ರೀಮತಿ ರೇಣುಕಾ ರಾಜೇಂದ್ರನ್.—ಈಗಾಗಲೇ ತುಮಕೂರಿಗೆ ರೇಷ್ಮೆ ಗೂಡಿನ ಮಾರುಕಟ್ಟೆಯನ್ನು ಕೊಡಲಾಗಿದೆ. ಆದರೆ ರೇಷ್ಮೆ ನೂಲನ್ನು ಬಿಚ್ಚುವವರು ಮುಂದೆ ಬಾರದಿದ್ದರೆ ನೂಲನ್ನು ತೆಗೆದುಕೊಳ್ಳುವವರು ಮುಂದೆ ಬರುವುದಿಲ್ಲ. ಆದುದರಿಂದ ಅಲ್ಲಿ ರೇಷ್ಮೆ ನೂಲನ್ನು ಬಿಚ್ಚುವವರಿಗೆ ಹೆಚ್ಚಾಗಿ ಪ್ರೋತ್ಸಾಹ ನೀಡಿದರೆ ಅಲ್ಲಿನ ವಹಿವಾಟನ್ನು ಬೇಗನೆ ಪ್ರಾರಂಭ ಮಾಡಲಿಕ್ಕೆ ಅನುಕೂಲ ವಾಗುತ್ತದೆಂದು ಹೇಳುವುದಕ್ಕೆ ಇಷ್ಟಪಡುತ್ತೇನೆ.

ಶ್ರೀ ರಮೇಶ್ ಕುಮಾರ್.—ಎಲ್ಲೆಲ್ಲಿ ಮಾರುಕಟ್ಟೆಗಳ ಅನುಕೂಲತೆಗಳನ್ನು ಒದಗಿಸಿ ಕೊಟ್ಟಿಲ್ಲವೋ ಅಲ್ಲಿ ಮಾರುಕಟ್ಟೆ ದರವನ್ನು ವಸೂಲ್ಮಾಡುವುದನ್ನು ನಿಲ್ಲಿಸಿ ಪೂರ್ಣ ಸೌಲಭ್ಯವನ್ನು ಒದಗಿಸಿದ ನಂತರ ಮಾರ್ಕೆಟ್ ಫೀ ಅನ್ನು ವಸೂಲ್ಮಾಡುವ ನಿರ್ಣಯ ತೆಗೆದುಕೊಳ್ಳುತ್ತೀರಾ ?

ಶ್ರೀಮತಿ ರೇಣುಕಾ ರಾಜೇಂದ್ರನ್.—ಸಾಧ್ಯವಿಲ್ಲ. ಇರುವ ಬಾಡಿಗೆ ಮನೆಯಲ್ಲಿ ಸಾಕಷ್ಟು ಸೌಲಭ್ಯವನ್ನು ಒದಗಿಸಿಕೊಡಲಾಗಿದೆ. ಪರ್ಮನೆಂಟ್ ಕಟ್ಟಡಕ್ಕೆ ಜಾಗ ಒದಗಿಸಿದರೆ ಪರಿಶೀಲನೆ ಮಾಡುತ್ತೇವೆ.

ಶ್ರೀ ಡಿ. ಟಿ. ಮಾಯಣ್ಣ.—ಸಂತೆಮಾತೂರು, ಹುಲಿಯೂರುದುರ್ಗ ಹಾಗೂ ಕುದೂರು ಮಾರುಕಟ್ಟೆಗಳ ಸಲುವಾಗಿ ಜಮೀನನ್ನು ಕೊಡಲು ಅಲ್ಲಿನ ಮುನಿಸಿಪಾಲಿಟಿಯವರು ಮತ್ತು ಪಂಚಾಯಿತಿಯವರು ಸಿದ್ಧರಿದ್ದಾರೆ. ಸಂತೆಮಾತೂರಿಗೆ ಈಗಾಗಲೇ ಜಮೀನನ್ನು ಕೊಡಲು ಸಿದ್ಧರಿದ್ದಾರೆ. ಆದ್ದರಿಂದ, ಅಲ್ಲಿಗೆ ಕಟ್ಟಡ ಕಟ್ಟಿಸಿ ಕೊಡುವುದಕ್ಕೆ ಏರ್ಪಾಡು ಮಾಡಬೇಕು. ಈ ಬಗ್ಗೆ ಇಲಾಖೆಯಿಂದ ಅಲ್ಲಿನ ಮುನಿಸಿಪಾಲಿಟಿಗೆ ರಿಕ್ವಿಜಿಷನ್ ಅನ್ನು ಕಳುಹಿಸಿಕೊಡಬೇಕು. ಅದನ್ನು ಮಾಡುತ್ತೀರಾ ?

ಶ್ರೀಮತಿ ರೇಣುಕಾ ರಾಜೇಂದ್ರನ್.—ಆದಷ್ಟು ಜಾಗ್ರತೆ ಮಾಡುತ್ತೇವೆ.

Lease of land to private Sugar Factory at Shimoga

373 KADIDAL DIWAKAR (Thirthahalli) Will the Minister for Revenue be pleased to state,—

(a) the number of acres of land given on lease for growing sugarcane to a private sugar factory in Shimoga district;

(b) whether the Land Ceiling Act as per the Land Reforms Act will apply to this land :

(c) if so, the action taken by Government in this matter so far ;

(d) whether it is possible for distributing this excess lands to those who have lost their lands due to Varahi Hydro Electric Project ?

SRI MALLIKARJUNA M. KHARGE (Minister for Revenue)—

(a) Government has given an area of 1503 acres and 11 guntas to a private sugar factory on lease.

(b) Applicable,

(c) Notification has been issued under Section 79 (b) in the Karnataka State Gazette for making enquiry and taking possesion of the excess lands by the Government. But the Management of the said private sugar factory has filed a writ in the Karnataka High Court and brought a stay order (Writ Petition No, 14463-79). Correspondence has been made with the Government advocate vacating the stay order in the matter.

(d) After receipt of the final decision from the High Court of Karnataka, further action will be considered.

ಶ್ರೀ ಕಡಿದಾಳ್ ದಿವಾಕರ್—ನನ್ನ (ಅ) ಪ್ರಶ್ನೆಗೆ ಉತ್ತರವಾಗಿ ೧೫೦೩ ಎಕರೆ ೧೧ ಗಂಟೆ ಎಂದು ಹೇಳಿದ್ದೀರಿ. ಆದರಲ್ಲಿ ಯಾವಯಾವ ತಾಲೂಕಿನಲ್ಲಿ ಎಷ್ಟೆಷ್ಟು ಭೂಮಿಯನ್ನು ಕೊಟ್ಟಿದ್ದೀರಿ?

† ಶ್ರೀ ಮಲ್ಲಿಕಾರ್ಜುನ ಖಾರ್ಗೆ.—ನಮ್ಮಲ್ಲಿರತಕ್ಕ ಮಾಹಿತಿ ಪ್ರಕಾರ ೧೫೦೩ ಎಕರೆ ೧೧ ಕುಂಟೆ ಎಂದು ಇದೆ. ಜೊತೆಗೆ ಖಾತೆದಾರರ ಜಮೀನು ಎಂದು ೨೧೮೨ ಎಕರೆ ೮ ಗುಂಟೆ ಇದೆ. ಹೀಗೆ ಒಟ್ಟು ೩೬೮೫ ಎಕರೆ ೧೯ ಗುಂಟೆ ಇದೆ.

ಶ್ರೀ ಕಡಿದಾಳ್ ದಿವಾಕರ್.— ಹಾಗಾದರೆ ಸೀಲಿಂಗ್ ಲಿಮಿಟ್ ಅಪ್ಲೈ ಆಗುವುದು ಯಾವುದಕ್ಕೆ ಲೀಸಿಗೆ ಕೊಟ್ಟಿರುವುದಕ್ಕೋ, ಖಾತೆ ಜಮೀನಿಗೋ ಅಥವಾ ಎರಡಕ್ಕೂ ಆಗುತ್ತದೋ? ಮತ್ತು ಲೀಸಿನ ಹಿಡುವಳಿ ಮಿತಿ ಏನು

ಶ್ರೀ ಮಲ್ಲಿಕಾರ್ಜುನ ಖಾರ್ಗೆ.—ಎರಡಕ್ಕೂ ಸೀಲಿಂಗ್ ಲಿಮಿಟ್ ಅಪ್ಲೈ ಆಗುತ್ತದೆ. ಅವರಿಗೆ ಹೋಗತಕ್ಕದ್ದು, ೫೦ ಎಕರೆ ಮಾತ್ರ, ಉಳಿದಿದ್ದೆಲ್ಲ ಜಮೀನು ಸರ್ಕಾರದ ವಶದಲ್ಲಿರುತ್ತದೆ.

ಶ್ರೀ ಕಡಿದಾಳ್ ದಿವಾಕರ್.—ಆ ಜಮೀನು ಸರ್ವೆ ಆಗಿದೆಯೆ, ಇಲ್ಲದಿದ್ದರೆ ಸರ್ವೆ ಆಗಬೇಕೆಂಬ ಬೇಡಿಕೆ ಇದೆಯೆ ಸುಮಾರು ೫ ಸಾವಿರ ಎಕರೆ ಜಮೀನು ಬಗರ್‌ಹುಕುಂ ಆಗಿ ಸಾಗುವಳಿಯಾಗುತ್ತಿರುವುದು ತಮ್ಮ ಗಮನಕ್ಕೆ ಬಂದಿದೆಯೆ? ಹೀಗೆ ಬಗರ್ ಹುಕುಂ ಆಗಿದ್ದ ಜಮೀನಿನಲ್ಲಿ ಕೆಲವು ಮಂದಿ ಬಡವರಿಗೆ ಸಾಗುವಳಿ ಚೀಟಿ ಕೊಟ್ಟು ಆ ಜಮೀನು ಅವರ ಸ್ವಾಧೀನಕ್ಕೆ ಬಾರದೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಶ್ರೀ ಮಲ್ಲಿಕಾರ್ಜುನ ಖಾರ್ಗೆ.—ಎಷ್ಟು ಜಮೀನನ್ನು ಎನ್‌ಕ್ರೋಚ್ ಮಾಡಿದ್ದಾರೆಂಬ ಮಾಹಿತಿ ಇಲ್ಲ. ಅವರು ಕೇಳಿರತಕ್ಕ ಪ್ರಶ್ನೆಗೆ ಮಾಹಿತಿ ಒದಗಿಸಿದ್ದೇನೆ.

ಶ್ರೀ ಕಡಿದಾಳ್ ದಿವಾಕರ್.—ಇಪತ್ತಿನ ದಿವಸ ಸಾವಿರಾರು ಎಕರೆ ಜಮೀನು ಬಗರ್ ಹುಕುಂ ಆಗಿದೆ. ಅದನ್ನು ತೀರಾ ಬಡವರಿಗೆ ಮಂಜೂರ್ಮಾಡಿಕೊಟ್ಟು ಸಾಗುವಳಿ ಚೀಟಿಯನ್ನು ಕೊಟ್ಟಿದ್ದರೂ

ಸಹ ಆ ಜಮೀನು ಅವರ ಸ್ವಾಧೀನಕ್ಕೆ ಬಂದಿಲ್ಲ. ಈಗಲಾದರೂ ಅದನ್ನು ಅವರ ಸ್ವಾಧೀನಕ್ಕೆ ಕೊಡಿಸುತ್ತೀರಾ? ವರಾಹಿ ಜಲ ವಿದ್ಯುತ್ ಯೋಜನೆಯಿಂದ ತೊಂದರೆಯಾದವರಿಗೆ ಜಮೀನನ್ನು ಕೊಡಲು ನನ್ಕ್ಕ ತಾಲ್ಲೂಕಿನಲ್ಲಿ ಜಮೀನು ಇಲ್ಲ, ಅಲ್ಲಿರತಕ್ಕದ್ದೆಲ್ಲ ಅರಣ್ಯ ಪ್ರದೇಶವಾಗಿರುವುದರಿಂದ ಅದನ್ನು ಕೊಡುವುದಕ್ಕೆ ಬರುವುದಿಲ್ಲ. ಮಾನ್ಯ ಮುಖ್ಯ ಮಂತ್ರಿಗಳು ಸಹ ಅವರಿಗೆಲ್ಲ ಜಮೀನನ್ನು ಕೊಡುತ್ತೇವೆಂದು ಆಶ್ವಾಸನೆ ಕೊಟ್ಟಿದ್ದರು. ಈಗ ಏನು ಸ್ಟೇ ಇದೆ ಅದನ್ನು ವೆಕೇಟ್ ಮಾಡಿಸಿ ಕೊನೇ ಪಕ್ಷ ೨ ಸಾವಿರ ಎಕರೆಯನ್ನಾದರೂ ಆ ಜನರಿಗೆ ಕೊಡುವುದಕ್ಕೆ ಮೀಸಲಾಗಿಡುತ್ತೀರಾ?

ಶ್ರೀ ಮಲ್ಲಿಕಾರ್ಜುನ ಖಾರ್ಗೆ,—ಈಗಾಗಲೇ ನಾವು ಅಡ್ವೊಕೇಟ್ ಜನರಲ್ ಅವರಿಗೆ ಪತ್ರ ಬರೆದು ಸ್ಟೇ ವೆಕೇಟ್ ಮಾಡಿಸಬೇಕೆಂದು ಕೇಳಿಕೊಂಡಿದ್ದೇವೆ. ಆದಷ್ಟು ಜಾಗ್ರತೆ ಸ್ಟೇ ವೆಕೇಟ್ ಮಾಡಿಸಿ ಉಳಿದಂತಹ ಜಮೀನನ್ನು ವರಾಹಿ ಪ್ರಾಜೆಕ್ಟ್‌ನಿಂದ ನೊಂದಂತಹ ಜನರಿಗೆ ಕೊಡತಕ್ಕ ಪ್ರಯತ್ನ ಮಾಡುತ್ತೇನೆ.

Theft of K.S.R.T.C Bus in Gulbarga Depot.

418 SRI QUAMARUL ISLAM. (Gulbarga)—Will the Minister for Transport and Minor Irrigation be pleased to state,—

(a) whether it is a fact that the Karnataka State Road Transport Corporation bus has been stolen in Gulbarga depot on 18-12-1980 bearing No. MYF 6010;

(b) if so, the action taken by the Government in this matter?

SRI M. M. J. SADYOJATHA. (Minister for Transport and Minor Irrigation).—

(a) Yes.

(b) Complaint has been lodged with the police. Vigorous efforts are being made by Police to trace the bus.

ಶ್ರೀ ಭೀಮಣ್ಣ ಖಂಡ್ರೆ.—ಕಳುವಾಗಿರತಕ್ಕ ಬಸ್ಸು ಹಳೆಯದೋ ಅಥವಾ ಹೊಸನೋ ಅದರ ಬೆಲೆ ಎಷ್ಟು? ಅದಕ್ಕೆ ಯಾರು ಜವಾಬ್ದಾರರು ಎಂಬುದನ್ನು ಕಂಡುಹಿಡಿದ್ದೀರಾ? ಅದು ಯಾರ ನಿರ್ಲಕ್ಷತೆಯಿಂದ ಹೋಯಿತು ಅದು ರಾತ್ರಿ ಹೊತ್ತು ಕಳುವಾಯಿತೋ ಅಥವಾ ಹಗಲು ಹೊತ್ತು ಕಳುವಾಯಿತೋ ಆ ಸಮಯದಲ್ಲಿ ಯಾರು ಆ ಡಿಪೋದಲ್ಲಿ ಇನ್‌ಚಾರ್ಜ್ ಇದ್ದರು?

†ಶ್ರೀ ಎಂ.ಎಂ.ಜೆ. ಸದ್ಯೋಜಾತ.—ಆ ಬಸ್ಸಿನ ಬೆಲೆ ೧೧೨೭೦೬ ರೂಪಾಯಿಗಳು. ಅದು ಯಾರ ನೆಗ್ಲಿಜನ್ಸಿಯಿಂದ ಹೋಯಿತು ಎಂಬ ಮಾಹಿತಿ ಇಲ್ಲ. ಅದು ರಾತ್ರಿ ವೇಳೆ ಕಳುವಾಗಿದೆ. ಮತ್ತು ಆ ಸಂಬಂಧದಲ್ಲಿ ಅಲ್ಲಿದ್ದ ವಾಚ್‌ಮನ್ ಅನ್ನು ಸಸ್ಪೆಂಡ್ ಮಾಡಿದ್ದೇವೆ.

ಶ್ರೀ ಭೀಮಣ್ಣ ಖಂಡ್ರೆ.—ಇಲ್ಲಿ ಕದ್ದುಕೊಂಡು ಹೋದ ಬಸ್ಸುಗಳನ್ನು ಹೈದರಾಬಾದ್‌ನಲ್ಲಿ ಬಿಚ್ಚಿ ಮಾರಾಟ ಮಾಡುತ್ತಾರೆ. ಆ ಬಸ್ಸಿನ ೧೨೦ ರೂಪಾಯಿ ಬೆಲೆ ಬಾಳುವ ಸೀಟೊಂದನ್ನು ೬೦ ರೂಪಾಯಿಗೆ ಮಾರಾಟ ಮಾಡಿದಾಗ ಅದು ಕಳ್ಳ ಮಾಲೆಂದು ತಿಳಿದು ಬಂತು. ಆಮೇಲೆ ಅದರ ಮೇಲೆ ನೋಡಿದಾಗ ಕರ್ನಾಟಕ ಸರ್ಕಾರ ಎಂದು ಬರೆದಿತ್ತು. ಈ ಮಾತು ನನಗೆ ಗೊತ್ತಾದ ನಂತರ ಡಿ.ವೈ.ಎಸ್.ಪಿ. ಗೆ ತಿಳಿಸಿ ಇದರ ಬಗ್ಗೆ ಪೂರ್ಣ ಮಾಹಿತಿ ಬೇಕಾದರೆ ಹೇಳುತ್ತೇನೆಂದರೂ ಯಾರೂ ಇದುವರೆಗೆ ನನ್ನ ಹತ್ತಿರ ಬಂದಿಲ್ಲ. ಈ ಪ್ರಕಾರ ತನಿಖೆ ಮಾಡಿದರೆ ಪೋಲೀಸರು ಹೇಗೆ ಕಳ್ಳತನವನ್ನು ಪತ್ತೆ ಮಾಡುತ್ತಾರೆಂದು ಮಾನ್ಯ ಮುಖ್ಯ ಮಂತ್ರಿಗಳನ್ನು ಕೇಳುತ್ತೇನೆ. ಮತ್ತು ಈ ಬಗ್ಗೆ ಸರಿಯಾದ ರೀತಿಯಲ್ಲಿ ಬಂದೂಬಸ್ತ್ ಮಾಡಬೇಕೆಂದು ಹೇಳುತ್ತೇನೆ.

ಶ್ರೀ ಎಂ.ಎಂ.ಜೆ. ಸದ್ಯೋಜಾತ,—ಮಾನ್ಯ ಸದಸ್ಯರು ಮಾಹಿತಿ ಒದಗಿಸಿದ್ದಾರೆ. ಸೂಕ್ತ ಕ್ರಮ ತೆಗೆದುಕೊಳ್ಳುತ್ತೇನೆ.